

# ಸತ್ಯ-ಸೌಂದರ್ಯದ ಜುಗಲಬಂದಿ ಎಂದಿಗೂ ಹಳತಾಗದ ಹಿಮದ ಹಾದಿ

ಬೇಸಿಗೆಯ ಧಗೆಯಿಂದ ತಪ್ಪಿಸಿಕೊಳ್ಳಲಿಕ್ಕೆ ಗಿರಿಧಾಮಗಳಿಗೆ ಮನಸು ಹಂಬಲಿಸುವುದು ಸಹಜವಷ್ಟೇ. ಆದರೆ, ಇಲ್ಲಿನ ಮನಸು ಸದಾ ಹಂಬಲಿಸುವುದು ಹಿಮದಾಣಗಳಿಗೆ. ಕಣಿವೆ, ಶಿಖರ, ಬಯಲುಗಳನ್ನು ತುಂಬಿದ ಹಿಮದ ಹಾದಿಯಲ್ಲಿ ಹೆಜ್ಜೆಗಳನ್ನೂರುತ್ತ, ಆ ನಡಿಗೆಯಲ್ಲಿ ಸೌಂದರ್ಯವನ್ನು ಆಸ್ವಾದಿಸುತ್ತಲೇ ಬದುಕಿನ ಸತ್ಯಗಳನ್ನು ಕಂಡುಕೊಳ್ಳುವ ವಿಶಿಷ್ಟ ಪ್ರಯತ್ನ ಇಲ್ಲಿದೆ. ಪ್ರತಿ ಪಯಣವೂ ಚೆಲುವಿನ ಮರೆಯಲ್ಲಿ ಸತ್ಯ ಸಾಕ್ಷಾತ್ಕಾರದ ದಾರಿಗಳನ್ನು ನಮ್ಮೆದುರು ಅನಾವರಣಗೊಳಿಸುತ್ತಲೇ ಇರುತ್ತದೆ. ಆ ಹಾದಿಯನ್ನು ನೋಡುವ ಕಣ್ಣುಗಳು ನಮಗೆ ಬೇಕಷ್ಟೆ. ಅನುಭವ–ಅನುಭಾವ ಎರಡರ ಬೀಜಗಳೂ ಇರುವ ಹಿಮದಾಣಗಳ ಈ ಕಥನ, ಹಿಮದ ಶೀತಲ ಅನುಭವವನ್ನು ನೀಡುತ್ತಲೇ, ಬದುಕಿನ ಬೆರಗು–ಬೆಡಗುಗಳನ್ನು ಕಾಣಲು ಅಗತ್ಯವಾದ ಮಾನವೀಯ ನೋಟವನ್ನೂ ನೀಡುವಂತಿದೆ.

■ ರಹಮತ್ ತರೀಕೆರೆ